# ಕಬಡ್ಡಿ ಅಂಗಳದಲ್ಲಿ ಭಿನ್ನ ಧ್ವನಿ

ಕಬಡ್ಡಿ ಆಟಗಾರರೇ ಸೇರಿ ರಚಿಸಿರುವ 'ನ್ಯೂ ಕಬಡ್ಡಿ ಫೆಡರೇಷನ್ ಆಫ್ ಇಂಡಿಯಾ', ಇಂಟರ್‌ನ್ಯಾಷನಲ್ ಪ್ರೀಮಿಯರ್ ಕಬಡ್ಡಿ ಲೀಗ್ ಆಯೋಜನೆಗೆ ಮುಂದಾಗಿದೆ. ಈ ಲೀಗ್ ಹಾಗೂ ಫೆಡರೇಷನ್‌ನ ಚಟುವಟಿಕೆಗಳ ಬಗ್ಗೆ ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಎಂ.ವಿ.ಪ್ರಸಾದ್ ಬಾಬು (ಕಬಡ್ಡಿ ಬಾಬು) ಅವರನ್ನು 'ಸುಧಾ'ಗೆ **ಶಶಿಕುಮಾರ್ ಸಿ.** ಮಾತನಾಡಿಸಿದ್ದಾರೆ



**◆ 'ಇಂಡೋ ಇಂಟರ್ ನ್ಯಾಷನಲ್ ಪ್ರೀಮಿಯರ್ ಕಬಡ್ಡಿ ಲೀಗ್'ನ (ಐಐಪಿಕೆಎಲ್) ಉದ್ದೇಶವೇನು ?**

ಕಬಡ್ಡಿ ಅಪ್ಪಟ ದೇಸಿ ಕ್ರೀಡೆ. ನೆಲವನ್ನೇ ಅಖಾಡವನ್ನಾಗಿಸಿ ಭೂತಾಯಿಗೆ ನಮಸ್ಕರಿಸಿ ತೊಡೆ ತಟ್ಟಿ ಕಬಡ್ಡಿ ಎನ್ನುತ್ತಲೇ ಪ್ರಾರಂಭವಾಗುವ ಈ ಆಟದಲ್ಲಿ ಈ ನೆಲದ ಸೊಗಡಿದೆ. ಭಾರತದಲ್ಲಿ ಹಲವು ವರ್ಷಗಳಿಂದ ಕಬಡ್ಡಿ ಆಡುತ್ತಿದ್ದರೂ ಸರ್ಕಾರದಿಂದ ಹೇಳಿಕೊಳ್ಳುವಂತಹ ಪ್ರೋತ್ಸಾಹ ಸಿಕ್ಕಿಲ್ಲ. ವಿಶ್ವಮಾನ್ಯತೆಯೂ ದೊರೆತಿಲ್ಲ. ಒಲಿಂಪಿಕ್‌ನಲ್ಲಿ ಈ ಕ್ರೀಡೆಯನ್ನು ಕಾಣಬೇಕೆಂಬುದು ಸಹಸ್ರ ಜನರ ಕನಸು. ಅದನ್ನು ಈಡೇರಿಸುವ ಯಾವುದೇ ಲಕ್ಷಣಗಳು ಯಾವುದೇ 'ಕಬಡ್ಡಿ ಫೆಡರೇಷನ್'ಗಳಲ್ಲಿ ಕಂಡುಬಂದಿಲ್ಲ. ಹೀಗಾಗಿ, 'ನ್ಯೂ ಕಬಡ್ಡಿ ಫೆಡರೇಷನ್ ಆಫ್ ಇಂಡಿಯಾ' ರೂಪುಗೊಂಡಿದೆ. ಕಬಡ್ಡಿಯನ್ನು ಒಲಿಂಪಿಕ್‌ನಲ್ಲಿ ಕಾಣುವ ಕನಸಿನ ಪೂರ್ವಸಿದ್ಧತೆಯೇ ಈ ಲೀಗ್.

**◆ ಈಗಾಗಲೇ 'ಪ್ರೊ ಕಬಡ್ಡಿ' ಚಾಲ್ತಿಯಲ್ಲಿದೆ. 'ಐಐಪಿಕೆಎಲ್' ಅಗತ್ಯವೇನಿತ್ತು ?**

'ಪ್ರೊ ಕಬಡ್ಡಿ' ಒಂದು ರೀತಿಯಲ್ಲಿ ಅಮೆಚೂರ್ ಕಬಡ್ಡಿ ಫೆಡರೇಷನ್ ಆಫ್ ಇಂಡಿಯಾದ (ಎಕೆಎಫ್‌ಐ) ಪ್ರಾಯೋಜಿತ. ಎಕೆಎಫ್‌ಐನಲ್ಲಿ ಸಾಕಷ್ಟು ಅವ್ಯವಹಾರ ನಡೆದಿದೆ. 'ಪ್ರೊ ಕಬಡ್ಡಿ' ಲೀಗ್ ಕೂಡ ಪಾರದರ್ಶಕವಾಗಿಲ್ಲ. ಅಲ್ಲಿ 120ರಿಂದ 130 ಆಟಗಾರರಿಗೆ ಮಾತ್ರ ಅವಕಾಶ. ಹರಾಜಿನ ಪ್ರಕ್ರಿಯೆಯಲ್ಲಿ ಅವರಿಗೆ ನಿಗದಿಪಡಿಸಿದ ಬಿಡ್ ಮೊತ್ತವನ್ನೂ ಸರಿಯಾಗಿ ನೀಡುತ್ತಿಲ್ಲ. ಈ ಎಲ್ಲ ಸಂಗತಿಗಳನ್ನು ಗಮನದಲ್ಲಿಟ್ಟುಕೊಂಡು 'ಐಐಪಿಕೆಎಲ್' ಆಯೋಜಿಸಲು ಮುಂದಾಗಿದ್ದೇವೆ. ಕಬಡ್ಡಿಯನ್ನು ತಳಮಟ್ಟದಿಂದ ದೃಢವಾಗಿಸುವ ನಿಟ್ಟಿನಲ್ಲಿ ಈ ಲೀಗ್ ಉಪಯೋಗಕಾರಿಯಾಗಲಿದೆ.

**◆ 'ಪ್ರೊ ಕಬಡ್ಡಿ'ಯಿಂದ ಕಬಡ್ಡಿ ಕಳೆಗುಂದಿತು ಎಂಬುದು ನಿಮ್ಮ ವಾದವಾ?**

ಒಂದು ರೀತಿ ಹಾಗೆಯೇ ಆಗಿದೆ. 'ಪ್ರೊ ಕಬಡ್ಡಿ' ಶುರುವಾದ ಬಳಿಕ ಜಿಲ್ಲೆ, ರಾಜ್ಯ, ರಾಷ್ಟ್ರೀಯ ಮಟ್ಟದ ಸ್ಪರ್ಧೆಗಳನ್ನು 'ಎಕೆಎಫ್‌ಐ' ಸಂಪೂರ್ಣವಾಗಿ ನಿರ್ಲಕ್ಷಿಸಿದೆ. ಇದು ಆಟದ ಭವಿಷ್ಯಕ್ಕೆ ಸಂಚಕಾರ.

**◆ ಕಬಡ್ಡಿಯನ್ನು ಒಲಿಂಪಿಕ್‌ಗೆ ಸೇರಿಸುವ ನಿಟ್ಟಿನಲ್ಲಿ 'ಎಕೆಎಫ್‌ಐ'ನಿಂದ ಪ್ರಯತ್ನಗಳು ನಡೆದಿಲ್ಲವೇ?**

'ಎಕೆಎಫ್‌ಐ' ಎಂದರೆ ಅದು ಒಂದು ಮನೆಯ ಸ್ವತ್ತು. ಅದರ ಸಂಪೂರ್ಣ ನಿಯಂತ್ರಣ ಆ ಮನೆಯ ಸದಸ್ಯರದ್ದೇ ಎಂಬಂತಹ ವಾತಾವರಣ ಸೃಷ್ಟಿಯಾಗಿದೆ. ಅದು ಸರ್ವಾಧಿಕಾರದ ಧೋರಣೆ. ಸುಪ್ರೀಂಕೋರ್ಟ್ ಅವರನ್ನು ಅಧಿಕಾರದಿಂದ ವಜಾಗೊಳಿಸಿ 'ಎಕೆಎಫ್‌ಐ'ಗೆ ಆಡಳಿತಾಧಿಕಾರಿಯನ್ನು ನೇಮಿಸಿದೆ. ಒಲಿಂಪಿಕ್‌ಗೆ ಕಬಡ್ಡಿಯನ್ನು ಸೇರಿಸುವ ನಿಟ್ಟಿನಲ್ಲಿ 'ಎಕೆಎಫ್‌ಐ'ನಿಂದ ಪ್ರಯತ್ನಗಳು ನಡೆದಿಲ್ಲ.

**◆ ಹಾಗಾದರೆ 'ಎನ್‌ಕೆಎಫ್‌ಐ' ಏನೆಲ್ಲಾ ಕ್ರಮ ಕೈಗೊಂಡಿದೆ?**

ಕಬಡ್ಡಿಯನ್ನು ಒಲಿಂಪಿಕ್‌ಗೆ ಸೇರಿಸುವುದು 'ಎನ್‌ಕೆಎಫ್‌ಐ' ಆದ್ಯ ಕರ್ತವ್ಯ. ಆ ನಿಟ್ಟಿನಲ್ಲಿ ಆಗಬೇಕಾದ ಎಲ್ಲ ಕೆಲಸ ಕಾರ್ಯಗಳಲ್ಲಿ 'ಎನ್‌ಕೆಎಫ್‌ಐ' ಈಗಾಗಲೇ ಸಕ್ರಿಯವಾಗಿದೆ. 2018ರಲ್ಲಿ ಬೆಂಗಳೂರಿನಲ್ಲಿ ವರ್ಲ್ಡ್ ಕಪ್ ಕಬಡ್ಡಿ ಕಾನ್ಫರೆನ್ಸ್ ಅನ್ನು 'ಎನ್‌ಕೆಎಫ್‌ಐ' ವತಿಯಿಂದ ಆಯೋಜಿಸಲಾಗಿತ್ತು. ಕಬಡ್ಡಿಯನ್ನು ಪ್ರೀತಿಸುವ ಹಾಗೂ ಆಡಲು ಇಷ್ಟ ಪಡುವ 56 ರಾಷ್ಟ್ರಗಳು ಆ

